# ಹೊಸತು




## ಬೆರಿನ ಶೈನಿ ವ್ಯಾಕ್ಸ್

ಕ್ರೀಮ್, ವ್ಯಾಕ್ಸ್ ಮುಂತಾದ ಸೌಂದರ್ಯ ಸಾಧನಗಳ ಉತ್ಪಾದನಾ ಕಂಪೆನಿ ಬೆರಿನ ಇದೀಗ ತಲೆಕೂದಲಿಗಾಗಿಯೇ ಶೈನಿ ವ್ಯಾಕ್ಸ್ ಎಂಬ ಹೊಸ ಬಗೆಯ ಉತ್ಪನ್ನವೊಂದನ್ನು ಮಾರುಕಟ್ಟೆಗೆ ಪರಿಚಯಿಸಿದೆ. ನೈಸರ್ಗಿಕ ವಸ್ತುಗಳಾದ ಜೊಜೋಬ ಆಯಿಲ್, ಸಿಲಿಕೋನ್‌ಗಳಿಂದ ತಯಾರಿಸಲಾಗಿದೆ. ಇದನ್ನು ಬಳಸಿದರೆ ಕೂದಲಿಗೆ ಹೊಳಪು ಬರುತ್ತದೆ, ಆರೋಗ್ಯಯುತವಾಗಿಯೂ ಬೆಳೆಯುತ್ತದೆ ಎನ್ನುವುದು ಕಂಪೆನಿ ವಿವರಣೆ. ಬೆಲೆ 100 ಗ್ರಾಂ ಪ್ಯಾಕ್‌ಗೆ ₹ 135.

## ವಿವೆಲ್ ಸೆಲ್ ರಿನ್ಯೂ

ದೈನಂದಿನ ಚಟುವಟಿಕೆಗಳಲ್ಲಿ ಹಲವಾರು ಸಂದರ್ಭಗಳಲ್ಲಿ ತ್ವಚೆ ಹಾನಿಗೊಳಗಾಗುವ ಸಾಧ್ಯತೆ ಇದೆ. ಸೂಕ್ಷ್ಮ ಸನ್ನಿವೇಶಗಳಾದ ಬಿಸಿ ಶವರ್, ಏರ್ ಕಂಡೀಷನ್, ಆರ್ದ್ರತೆ, ಚಳಿ, ತ್ವಚೆ ಒಣಗುವುದು ಮುಂತಾದವುಗಳಿಂದ ತ್ವಚೆಗೆ ಹಾನಿಯಾಗುತ್ತದೆ. ಇಂತಹ ತ್ವಚೆಗೆ ಅಗತ್ಯ ಪ್ರೊಟೀನ್‌ಗಳಾದ ಕೊಲಾಜೆನ್ ನೀಡಿ ಆರ್ದ್ರತೆಯನ್ನು ಪೂರೈಸುವ ನೂತನ ಉತ್ಪನ್ನ 'ವಿವೆಲ್ ಸೆಲ್ ರಿನ್ಯೂ' ಮಾರುಕಟ್ಟೆಗೆ ಬಂದಿದೆ.

5 ವರ್ಷಗಳ ಸಂಶೋಧನೆಯ ನಂತರ ಇದನ್ನು ಬಿಡುಗಡೆ ಮಾಡಲಾಗಿದೆ. ತ್ವಚೆಗೆ ಹಾನಿಯಾಗುವ ಪರಿಸರದ ಅಂಶಗಳೊಂದಿಗೆ ಹೋರಾಡುವಂತಹ ನಿರೋಧಕ ಶಕ್ತಿಯನ್ನು ಇದು ಹೊಂದಿದೆ ಎನ್ನುತ್ತದೆ ಕಂಪೆನಿ.

ವಿವೆಲ್ ಸೆಲ್ ರಿನ್ಯೂ ಫೇಸ್ ಮಾಯಿಶ್ಚರೈಸರ್, ಬಾಡಿ ಲೋಷನ್ ಮತ್ತು ಹ್ಯಾಂಡ್ ಕ್ರೀಮ್‌ಗಳನ್ನೊಳಗೊಂಡಿದೆ. ಫೇಸ್ ಮಾಯಿಶ್ಚರೈಸರ್ ಬೆಲೆ 50 ಎಂಎಲ್‌ಗೆ ₹ 349, ಫೋರ್ಟಿಫೈ ರಿಪೇರ್ ಬಾಡಿ ಲೋಷನ್ ಬೆಲೆ 250 ಎಂಎಲ್ ₹ 249, ಫೋರ್ಟಿಫೈ ರಿಪೇರ್ ಹ್ಯಾಂಡ್‌ಕ್ರೀಮ್ 50 ಎಂಎಲ್ ಬೆಲೆ ₹ 99.
ವಿವರಕ್ಕೆ: 25253891/ 9945511831/9739594354







## ಹೊಸ ಸೋನಿ ಕ್ಯಾಮೆರಾ

ಕ್ರಾಂತಿಕಾರಿ ಡಿಎಸ್‌ಎಲ್‌ಟಿ ಪ್ರೊಫೆಷನಲ್ ಕ್ಯಾಮೆರಾ, ಪ್ರೊಫೆಷನಲ್ ವೀಡಿಯೊ ಕ್ಯಾಮೆರಾ, ಕಾಂಪ್ಯಾಕ್ಟ್ ಕ್ಯಾಮೆರಾಗಳು ಸೇರಿದಂತೆ 9 ಹೊಸ ಕಟಿಂಗ್-ಎಡ್ಜ್ ಕ್ಯಾಮೆರಾಗಳ ಜತೆಗೆ ಅತ್ಯಾಧುನಿಕವಾದ ವಿವಿಧ ಬಗೆಯ ಲೆನ್ಸ್‌ಗಳನ್ನೂ ಸೋನಿ ಇಂಡಿಯಾ ಕಂಪೆನಿ ಬಿಡುಗಡೆ ಮಾಡಿದೆ. ಇದೇ ವೇಳೆ ಅತ್ಯಾಧುನಿಕ ಮಾದರಿಯ ಫುಲ್ ಫ್ರೇಮ್ ಇಮೇಜಿಂಗ್ ಸೆನ್ಸಾರ್ ಸೌಲಭ್ಯ ಒಳಗೊಂಡಿರುವ ಡಿಎಸ್‌ಸಿ-ಆರ್‌ಎಕ್ಸ್1 ಕ್ಯಾಮೆರಾವನ್ನೂ ಕಂಪೆನಿ ಹೊರತಂದಿದೆ.

ಡಿಎಸ್‌ಸಿ-ಆರ್‌ಎಕ್ಸ್1 ಕಾಂಪ್ಯಾಕ್ಟ್ ಕ್ಯಾಮೆರಾ. ಆದರೆ 35 ಎಂಎಂ ಫುಲ್‌ಫ್ರೇಮ್ ಸೆನ್ಸಾರ್ ಮತ್ತು ಕ್ಯಾಮೆರಾದ ಬಾಡಿಯಲ್ಲಿ ವೈಡ್ ಅಪಾರ್ಚರ್ ಎಫ್2 ಫಿಕ್ಸೆಡ್ ಫೋಕಲ್ ಲೆನ್ಸ್ ಇದ್ದು, ಪ್ರವಾಸ ಮತ್ತು ಸ್ಟ್ರೀಟ್ ಫೋಟೊಗ್ರಫಿಗೆ ಸೂಕ್ತವಾಗಿದೆ. ಉತ್ತಮ ಗುಣಮಟ್ಟದ ಭಾವಚಿತ್ರಗಳನ್ನು ತೆಗೆಯಲು ಹಾಗೂ ಪ್ರತಿದಿನದ ಶೂಟಿಂಗ್‌ಗೆ ಹೆಚ್ಚು ಅನುಕೂಲಕರವಾಗಿದೆ. ಇದು ಹಗುರ ಮತ್ತು ಚಿಕ್ಕದಾಗಿರುವ ಸಾಧನವಾಗಿದೆ ಎನ್ನುವುದು ಕಂಪೆನಿ ವಿವರಣೆ. ಹವ್ಯಾಸಿಗಳು ಯಾವುದೇ ಸಮಸ್ಯೆಯಿಲ್ಲದೆ ಕ್ರಿಯಾತ್ಮಕವಾಗಿ ಚಿತ್ರಗಳನ್ನು ತೆಗೆಯಬಹುದು.

ಬೆಲೆ ₹ 1,79,990.

ಮಾಹಿತಿಗೆ: 89714 98865




## ಓಪಿಯಂ ಕನ್ನಡಕ

ಗ್ಲಾಮರಸ್ ಲುಕ್ ಕೊಡುವ ಹೊಸ ಬಗೆಯ ಕನ್ನಡಕಗಳನ್ನು ಓಪಿಯಂ ಬಿಡುಗಡೆ ಮಾಡಿದೆ. ವಿವಿಧ ಮಾದರಿ ಮತ್ತು ಶೇಪ್‌ಗಳಲ್ಲಿ ಸಿಗುತ್ತದೆ. ಹಗುರವಾಗಿದ್ದು, ಧರಿಸಲು ಕಣ್ಣಿಗೆ ಆರಾಮದಾಯಕವಾಗಿದೆ. ಗ್ರಾಹಕರ ಅಭಿರುಚಿಗೆ ತಕ್ಕಂತೆ ಹಲವು ಆಯ್ಕೆಗಳೂ ಇವೆ. ಆಕರ್ಷಕ ಬಣ್ಣಗಳಲ್ಲಿ ಲಭ್ಯ. ಲೈಫ್ ಸ್ಟೈಲ್, ಪ್ಯಾಂಟಲೂನ್ಸ್, ಶಾಪರ್ಸ್ ಸ್ಟಾಪ್ ಮತ್ತು ಎಲ್ಲ ಪ್ರಮುಖ ಮಳಿಗೆಗಳಲ್ಲಿ ಸಿಗುತ್ತದೆ. ಬೆಲೆ ₹ 2475.
ವಿವರಕ್ಕೆ: 9987213136